ದಿನಾಂಕ **: 11.02.2026** ರಂದು ಪಿಡಬ್ಲ್ಯೂ - 2 ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು.

<u>ಪಾಟೀ ಸವಾಲುಃ</u> ಶ್ರೀ ಬಿ.ಕೆ., ಪ್ರತಿವಾದಿ ಪರ ವಕೀಲರಿಂದಃ

ನಾನು ಹೆಬ್ರಿಯಲ್ಲಿ ಜೆ.ಸಿ.ಬಿ. ಹೊಂದಿದ್ದೇನೆ. ಸಂತೋಷ್ ಶೆಟ್ಟಿಯವರನ್ನು ನಾನು ನೋಡಿ ಪರಿಚಯವಿರುತ್ತದೆ. ಈ ದಿನ ನ್ಯಾಯಾಲಯದಲ್ಲಿ ಪ್ರಕರಣವಿದೆ ಎಂದು ನನಗೆ ನೋಟೀಸು ಬಂದಿದ್ದು, ವಾದಿಯ ಪರ ವಕೀಲರ ಬಳಿಯೂ ಕೇಳಿದ್ದೇನೆ. ಈಗ ನನಗೆ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ತೋರಿಸಿದ್ದು, ಅದನ್ನು ಚಂದ್ರಶೇಖರ ಅಂಗಡಿಯಲ್ಲಿ ತಯಾರಿಸಲಾಗಿದೆ ಎಂದು ನುಡಿಯುತ್ತೇನೆ. ಅದನ್ನು ಎಲ್ಲಿ ಬೆರಳಚ್ಚು ಮಾಡಿಸಿದ್ದು ಎಂದು ನನಗೆ ತಿಳಿದಿಲ್ಲ. ನಾನು ಅದಕ್ಕೆ ಸಹಿ ಮಾಡುವ ಸಮಯದಲ್ಲಿ ನನ್ನ ಜೊತೆ ಸರಿತಾ ಶೆಟ್ಟಿ ಯವರು ಇದ್ದರು. ಈ ದಿನ ನ್ಯಾಯಾಲಯಕಕ್ಷ್ ನನ್ನ ಜೊತೆ ಸರಿತಾ ರವರೂ ಸಹಾ ಬಂದಿರುತ್ತಾರೆ. ವಾದಿಯವರು ನನ್ನ ಜೊತೆ ಬಂದಿರುವುದಿಲ್ಲ.

ಈಗ ನನಗೆ ನಿಪಿ - 7 ಮತ್ತು ನಿಡಿ - 1 ನ್ನು ತೋರಿಸಿದ್ದು,ಅದರಲ್ಲಿ ಇರುವ ವ್ಯತ್ಯಾಸದಲ್ಲಿ ನಿಡಿ - 1 ರಲ್ಲಿ ಸಾಕ್ಷಿಯ ಸಹಿ ಇರುವುದಿಲ್ಲ ಮತ್ತು ನಿಪಿ - 7

ರಲ್ಲಿ ಸಾಕ್ಷಿಗಳ ಸಹಿ ಇರುತ್ತದೆ ಎಂದರೆ ಸರಿ. ಜೆರಾಕ್ಸ್ ಪ್ರತಿ ಎಂದರೆ ನನಗೆ ತಿಳಿದಿರುತ್ತದೆ. ಒಂದು ಮೂಲ ಪ್ರತಿಯ ಜೆರಾಕ್ಸ್ ಆದಲ್ಲಿ ಮೂಲ ಪ್ರತಿಯ ಪ್ರತಿರೂಪವೇ ಜೆರಾಕ್ಸ್ ನಲ್ಲಿರುತ್ತದೆ ಎಂದರೆ ಸರಿ. ನಿಡಿ - 1 ಮತ್ತು ನಿಪಿ - 7 ಕ್ಕೆ ವಾದಿಯು ಸಹಿ ಹಾಕಿದ್ದಾರೆ ಎಂದು ಹೇಳುವ ಸಮಯದಲ್ಲಿ ನಾನು ಸಹಿ ಹಾಕಿರದ ಕಾರಣ, ನಿಡಿ - 1 ರಲ್ಲಿ ನಮ್ಮಗಳ ಸಹಿ ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ - 7 ಕ್ಕೆ ನಾನು ಯಾವ ದಿನಾಂಕದಂದು ಸಹಿ ಹಾಕಿದ್ದೇನೆ ಎಂದು ನನಗೆ ನೆನಪಿಲ್ಲ. ಅಂದಾಜು ಮಧ್ಯಾಹ್ನ 12 ಗಂಟೆಯ ಸಮಯದಲ್ಲಿ ಸಹಿ ಹಾಕಿದ್ದೇವೆ. ಅದನ್ನು ಚಂದ್ರಶೇಖರ ರವರ ಅಂಗಡಿಯಲ್ಲಿ ಸಹಿ ಹಾಕಿದ್ದೇವೆ.

ಪ್ರತಿವಾದಿ ಚಂದ್ರಶೇಖರ್ ರವರ ಅಂಗಡಿಯು ಶಿವಪುರದಲ್ಲಿರುತ್ತದೆ. ಹಾಗೆ ಸಹಿ ಹಾಕುವ ಸಮಯದಲ್ಲಿ ನಾನು, ವಾದಿ, ಪ್ರತಿವಾದಿ ಮತ್ತು ಸರಿತಾ ರವರು ಹಾಜರಿದ್ದೆವು. ನಾನು ಸಹಿ ಹಾಕಲು ಅವರ ಅಂಗಡಿಗೆ ಬರಬೇಕು ಎಂದು ಪ್ರತಿವಾದಿಯೇ ನನಗೆ ತಿಳಿಸಿದ್ದರು.

ನಾನು ಹೆಬ್ರಿ ಮತ್ತು ಮಂಡಾಡಿಯಲ್ಲಿ ವಿದ್ಯಾಭ್ಯಾಸ ಮಾಡಿದ್ದೇನೆ. ಪ್ರತಿವಾದಿಯು ನನ್ನ ವ್ಯಾಸಾಂಗದ ಸಮಯದಲ್ಲಿ ನನ್ನ ಸಹಪಾಠಿಯಾಗಿರುವುದಿಲ್ಲ. ಅವರು ನನ್ನ ಸ್ನೇಹಿತರಲ್ಲ. ಆದರೆ ಪರಿಚಯವಿದ್ದಾರೆ. ಪ್ರತಿವಾದಿಯ ಮೊಬೈಲ್ ಸಂಖ್ಯೆ ನನ್ನ ಬಳಿ ಆ ಸಮಯದಲ್ಲಿ ಇದ್ದು, ಅವರು ನನ್ನ ಜೆ.ಸಿ.ಬಿ. ಯಲ್ಲಿ ಕೆಲಸ

ಮಾಡಿಸುತ್ತಿದ್ದರು. ಅವರ ಫೋನ್ ಸಂಖ್ಯೆ ನನ್ನ ಬಳಿ ಈಗ ಇರುವುದಿಲ್ಲ. ನಾನು ಮತ್ತು ವಾದಿಯು ಜೆ.ಸಿ.ಬಿ. ವ್ಯವಹಾರ ಮಾಡಿರುವುದಿಲ್ಲ.

ವಾದಿಯ ವಕೀಲರು ಶ್ರೀಹರಿ ಮೊಗೆರಾಯರು ಎಂದು ನಾನು ಕೇಳಿ ತಿಳಿದುಕೊಂಡಿದ್ದೇನೆ. ನ್ಯಾಯಾಲಯದ ನೋಟೀಸು ಬಂದ ನಂತರ ಅವರನ್ನು ಭೇಟಿಯಾಗಿದ್ದೇನೆ. ಸರಿತಾ ಶೆಟ್ಟಿಯವರು ಸುಮಾರು 7 – 8 ವರ್ಷದಿಂದ ಪರಿಚಯವಿದ್ದಾರೆ. ವಾದಿಯು ಶಿವಪುರ ಗ್ರಾಮ ಪಂಚಾಯತ್ ಸದಸ್ಯರಾಗಿದ್ದರು. ಪ್ರತಿವಾದಿಯು ನನ್ನ ಜೆ.ಸಿ.ಬಿ. ಯಲ್ಲಿ ಕೆಲಸ ಮಾಡಿಸುತ್ತಿದ್ದರು ಎಂದು ತೋರಿಸಲು ಈಗ ನನ್ನ ಬಳಿ ದಾಖಲೆಗಳು ಇರುವುದಿಲ್ಲ. ಆದರೆ ಪ್ರತಿವಾದಿಯು ನನಗೆ ಗೂಗಲ್ ಪೇ ಮುಖಾಂತರ ಹಣ ವರ್ಗಾವಣೆ ಮಾಡಿದ್ದಾರೆ.

ನಾನು ಪ್ರತಿವಾದಿಗೆ ಸಂಬಂಧಿಸಿದ ಜಾಗದ ಬಗ್ಗೆ ಸಾಕ್ಷಿ ಹೇಳಲು ಬಂದಿದ್ದೇನೆ. ಸದರಿ ಸ್ವತ್ತು ಪ್ರತಿವಾದಿಯ ಮನೆಯ ಬಳಿ ಇದ್ದು, ನನಗೆ ತಿಳಿಸಿದ್ದು, ನನಗೆ ನಿಖರವಾಗಿ ಸ್ಥಳ ತಿಳಿದಿಲ್ಲ. ವಾದಿ ಕರಾರು ಆದ ದಿನ ಯಾವ ಬಟ್ಟೆ ಧರಿಸಿದ್ದರು ಎಂದು ನನಗೆ ನೆನಪಿಲ್ಲ. ಪ್ರತಿವಾದಿ ಸದರಿ ಕರಾರು ಆದ ದಿನ ಯಾವ ಬಟ್ಟೆ ಧರಿಸಿದ್ದರು ಎಂದು ನನಗೆ ಗೊತ್ತಿಲ್ಲ. ಕರಾರಿಗೆ ಸಹಿ ಹಾಕಿ ಎಂದು ಪ್ರತಿವಾದಿ ನನಗೆ ಯಾವಾಗಲೂ ಕರೆದಿರುವುದಿಲ್ಲ ಎಂದರೆ ಸರಿಯಲ್ಲ,. ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸಹಿ ಹಾಕಿದ

ಕರಾರು ಎಷ್ಟು ಪುಟಗಳನ್ನು ಹೊಂದಿತ್ತು ಎಂದು ನಾನು ಲೆಕ್ಕ ಮಾಡಿರುವುದಿಲ್ಲ. ನನ್ನ ಸಮಕ್ಷಮ ಪ್ರತಿವಾದಿಯು ಯಾವುದೇ ಸಹಿ ಹಾಕಿರುವುದಿಲ್ಲ ಎಂದರೆ ಸರಿಯಲ್ಲ. ನಾನು ವಾದಿಗೆ ಸಹಾಯ ಮಾಡುವ ಉದ್ದೇಶದಿಂದ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ಸಾಕ್ಷಿಯ ಹೇಳಿಕೆಯಂತೆ ನಾನು ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನ ನೀಡಿದ್ದು, ಅದರಂತೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಇದೆ.

Sd/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎಸಿಜೆಎಂ.,
ಕಾರ್ಕಳ.